Doc SIS
T-P-2

Reg no KRNN 12 - For Influential Publicity - 27-10-76

ಕೃಷ್ಣ ಮಹೋತ್ಸವ ನೆರವೇರಿಸಿ ವಜ್ರಮಹೋತ್ಸವ ನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60 th Diamond Jubilee Year
ನೇ ವಜ್ರಮಹೋತ್ಸವ ವರ್ಷ

★ Satyavadi Daily . Mysore 4 ★

ಸ್ಥಾಪಕರು : ಆರಮನೆ ಏರಸ್ಟೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

ರಷ್ಯಾದಲ್ಲಿ ಭಾರತದ ತಿಂಡಿಗಳು

ನವದೆಹಲಿ — ಮಾಸ್ಕೋದಲ್ಲಿ ಇಡ್ಲಿ, ದೋಸೆ ಮತ್ತಿತರ ಭಾರತದ ಆಹಾರಗಳು ಶಭ್ದದಲ್ಲೇ ದೊರೆಯುವ ವ್ಯವಸ್ಥೆಯಾಗುತ್ತಿರುವುದೆಂದು ರಷ್ಯಾದಲ್ಲಿ ಭಾರತ ರಾಯಭಾರಿಯಾಗಿರುವ ಶ್ರೀ ಗುಜ್ರಾಲ ಹೇಳಿದರು.

○

ಶ್ರೀ ಜಗದ್ಗುರುಗಳವರ ವರ್ಧಂತ್ಯುತ್ಸವ

ಶೃಂಗೇರಿ— ತಾ|| 22 ರಂದು ಶ್ರೀ ಶೃಂಗೇರಿ ಜಗದ್ಗುರುಗಳು ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ 60 ನೇ ವರ್ಧಂತ್ಯುತ್ಸವ ವಮಾರಂಭಗಳನ್ನು ಕೇಂದಾಯ ಮಂತ್ರಿ ಶ್ರೀ ಹುಚ್ಚಮಾಸ್ತಿಗೌಡರು ಉದ್ಘಾಟಿಸಿದರು.

★

ಪೋಲಿಸರಿಗೆ ಸ್ತುತ್ಯ ಸೂಚನೆ

ರಾಯಚೂರು— ಪೋಲೀಸು ಆವರಣದಲ್ಲಿ ಯಾರೋ ಒಬ್ಬ ಪೋಲೀಸಿನವನ ಸ್ಟೈಚನ್ನು ಅನಾವರಣೆ ಮಾಡುತ್ತಾ, ಸಹಕಾರ ಮಂತ್ರಿ ಶ್ರೀ ರಂಗನಾಥ್‌ರವರು, 20 ಅಂಶಗಳ ಜಾರಿನಂತರ ಪೋಲೀಸರ ಪಾತ್ರ ಶಾಂತಿ ಶಿಸ್ತು ಪಾಲನೆಯಲ್ಲಿ ಹೆಚ್ಚಿದೆ ಎಂದು ಹೇಳಿದರ.

★

ಸ್ಕೌಟ್ ನಾಯಕನ 100 ವರ್ಷದ ಜನ್ಮೋತ್ಸವ

ವಿಶ್ವದಲ್ಲಿ ಅತಿ ಹೆಚ್ಚು ವಯಸ್ಸಿನ ಚಟುವಟಿಕೆ ಬಾಯ್ ಸ್ಕೌಟ್ ನಾಯಕ ಶ್ರೀ ವಾಲ್ಟರ್ ವುಡ್ ತನ್ನ 100 ನೇ ವರ್ಷದ ಜನ್ಮದಿನೋತ್ಸವನ್ನು ಭಾನುವಾರ ನೆರವೇರಿಸಿದರು — ನೋವಾಸ್ಕೋಷಿಯಾನ ಕೆಂಟ್‌ವಿಲ್‌ನ ನಾಯಕರು ಬ್ರಿಟಿಷ್ ಶವಂದ ಶ್ರೀ ವುಡ್‌ರವರಿಗೆ ಕಟ್ಟಿಣವ ಬೀಗದಕೈ ಕೊಟ್ಟರು.

○

44 ನೇ ರಾಜ್ಯಾಂಗ ತಿದ್ದುಪಡಿ

ನವದೆಹಲಿ — ಲೋಕಸಭೆಯಲ್ಲಿ 44 ನೇ ರಾಜ್ಯಾಂಗ ತಿದ್ದುಪಡಿಯು ಚರ್ಚೆ ಸೋಮವಾರ ಸ್ವಾರಂಭವಾಯಿತು

●

ಬಿಡುಗಡೆ

ಬೆಂಗಳೂರು — ವಿಸಾ ಪ್ರಕರ ಬಂಧನದಲ್ಲಿದ್ದ ವಿರೋಧ ಪಕ್ಷ ನಾಯಕ ಶ್ರೀ ದೇವೇಗೌಡರು ಬಿಡುಗಡೆ ಮಾಡಲ್ಪಟ್ಟರೆಂದು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು

○

ಡಾ || ಮೋದಿ

ಪದ್ಮಭೂಷಣ ನೇತ್ರದಾನಿ ಡಾ || ಎಂ ಸಿ. ಮೋದಿ (ಭಾರತಾಧ್ಯಕ್ಷರ ಗೌ|| ನೇತ್ರ ಚಿಕಿತ್ಸಕರು) ಯವರು ತಾ || 29 ರಂದು ಮಿರೇಜ್‌ನಲ್ಲಿ ಉಚಿತ ನೇತ್ರ ತಪಾಸಣೆ ಶಿಬಿರ ನಡೆಸುವರು

ಮೈಸೂರಿನಲ್ಲಿ ರಾಜ್ಯೋತ್ಸವ

ಮೈಸೂರು ಜಿಲ್ಲಾ ಮಟ್ಟದ ರಾಜ್ಯೋತ್ಸವ ಆಚರಣೆ ಕಾರ್ಯಕಾರಿ ಸಮಿತಿ ಸಭೆ ಇತ್ತೀಚೆಗೆ ಜಿಲ್ಲಾಧಿಕಾರಿ ಶ್ರೀ ವಿ ಸಿ ವೆಲ್ಲೋರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು — ರಜತ ರಾಜ್ಯೋತ್ಸವ ಸಮಾರಂಭವನ್ನು ಮೈಸೂರು ನಗರದ ಪುರಭವನದಲ್ಲಿ ನವೆಂಬರ್ 1 ರಂದು ವಿಜೃಂಭಣೆಯಿಂದ ನಡೆಸಲು ತೀರ್ಮಾನಿಸಲಾಯಿತು — ಸಮಾರಂಭದ ಅಂಗವಾಗಿ ಕರ್ನಾಟಕದ ಭೂಪ್ರಕೃತವನ್ನು ಹೂವಿನಿಂದ ಪಾಲಂಕೃತವಾದ ಆನೆಯ ಮೇಲೆ ಮೆರವಣಿಗೆಯಲ್ಲಿ ಕೊಂಡೊಯ್ಯಲು ನಿರ್ಧರಿಸಲಾಯಿತು

ಕಳ್ಳ ಸಾಗಣೆದಾರ ಶರಣಾದ

ಬೆಂಗಳೂರು — ಕರ್ನಾಟಕದ ಕುಖ್ಯಾತ ಕಳ್ಳ ಸಾಗಣೆದಾರ ರಿಕಾಬ್ ಚಂದ್ ಅಲಿಯಾಸ್ ದೇವಿಚಂದ್ ಕಸ್ಟಮ್ಸ್ ಮತ್ತು ಕೇಂದ್ರ ಅಬ್ಕಾರಿ ಅಧಿಕಾರಿಗಳ ಮುಂದೆ ಹಾಜರಾಗಿ ಶರಣಾಗತನಾದನು.

○

ಪ್ರಧಾನರಿಗೆ ಮನವಿ

ಬೊಂಬಾಯಿ — ಪ್ರೊ. ಸಿ ಎನ್ ವಕೀಲ್ ಮತ್ತಿತರ ಬೊಂಬಾಯಿನ 7 ಜನ ಪ್ರಮುಖ ಪೌರರು ಪ್ರಧಾನಿಯವರಿಗೆ ಸಂಯುಕ್ತ ಪತ್ರ ಕಳುಹಿಸಿ, ಮುಂದಿನ ಚುನಾವಣೆ ವರೆಗೆ ಜನರು ಅನಿರ್ಬಂಧವಾಗಿ ರಾಜ್ಯಾಂಗ ತಿದ್ದುಪಡಿ ಯೋಜನೆ ಕಾರ್ಯತು ಹೇಳುವಂತಾಗಲು ಅಲ್ಲಿಯವರೆಗೆ ಪಾರ್ಲಿಮೆಂಟ್ ಮುಂದೆ ಅದನ್ನು ತರಬಾರದೆಂದು ಮನವಿ ಕಳಿಸಿದರು.

★

ಬೆಳ್ಳಿ ಭಂಗಾರ ಸಿಗುವ ಸಂಭವ

ಶ್ರೀನಗರ — ಲಷ್ಟೀಲ್ ಬೆಟ್ಟ ಭಾಗದಲ್ಲಿ ಭಂಗಾರ ಬೆಳ್ಳಿ ದೊರೆಯುವ ಸಂಭವ ಕಂಡುಬಂದಿದೆ.

★

ತಿದ್ದುಪಡಿ ಬಿದ್ದಿತು

ನವದೆಹಲಿ — ಕಾಂಗ್ರೆಸ್ ಸದಸ್ಯ ಶ್ರೀ ಎಂ ಸಿ ಡಾಗಾರವರು 44 ನೇ ತಿದ್ದುಪಡಿಯನ್ನು 31 ಸದಸ್ಯರ 2 ಸಭೆಗಳ ಜಂಟಿ ಸಮಿತಿಗೆ ಹಾಕಬೇಕೆಂದು ತಂದಿದ್ದ ತಿದ್ದುಪಡಿ ಬಿದ್ದುಹೋಯಿತು.

ಗಡಿಯಾರಕ್ಕೆ ಕ್ಷಕಿರಣ

ಲಂಡನ್ — ಪಾರ್ಲಿಮೆಂಟು ಭವನಗಳ ಗೋಪುರದಲ್ಲಿ ಇರುವ ಬಿಗ್‌ಬೆನ್ ಗಡಿಯಾರವು ವೃದ್ಧಾಪ್ಯದಿಂದ ನರಳುತ್ತಿದ್ದು ಅದರ 2 ಕಾಗ್ ವೀಲ್‌ಗಳನ್ನು ಬದಲಾಯಿಸಬೇಕಾಗಿದೆ ಎಂದು, ನೂರಿಸ್ವತ್ತು ವರ್ಷಗಳ ಈ ಗಡಿಯಾರದ ಕ್ಷಕಿರಣ ತೆಗೆದ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

○

ಕೃತಕ ಅಂಗಗಳ ಅಭಿವೃದ್ಧಿ

ಲಾಸ್ ಏಂಜಲ್ಸ್ — ಮಾನವನಲ್ಲಿ ಜಖಂಗೊಂಡಿರುವ ಅಥವಾ ಹಾಳಾಗಿರುವ ಭಾಗಗಳಲ್ಲಿ ಸೇರಿಸಲು ಕೃತಕ ಅಂಗಗಳನ್ನು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಡಾ|| ವಿಲಿಯಂ ಮೋ ಮಾಸ್ಟರ್ ಅಭಿವೃದ್ಧಿಗೊಳಿಸಿರುವರು.

●

ಸಿದ್ಧತೆಗೆ ಯೋಜನೆ

ಬೆಂಗಳೂರು — ಭದ್ರಾವತಿ ಮೈಸೂರು ಪೇಪರ್ ಮಿಲ್‌ನವರು 1979 ರ ವೇಳೆಗೆ ನ್ಯೂಸ್ ಪ್ರಿಂಟ್ ಮತ್ತು ಸಕ್ಕರೆ ತಯಾರಿಕೆ ಭಾಗಗಳನ್ನು ಸಿದ್ಧಪಡಿಸಲು ಯೋಜಿಸಿದ್ದಾರೆ.

★ ಜಮ್ಮು ಕಾಶ್ಮೀರದಲ್ಲಿ ಪೌರ ಚುನಾವಣೆ ಮುಂದುವರಿಸಲು ಮತ್ತು ಮಂತ್ರಿ ಮಂಡಲ ವಿಸ್ತರಿಸಿರುವ ಮುಖ್ಯಮಂತ್ರಿ ಶ್ರೀ ಷೇಖ್ ಅಬ್ದುಲ್ಲರ ನಿರ್ಧಾರವನ್ನು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಸ್ವಾಗತಿಸಿರುವರು

"ಸತ್ಯವಾದಿ" ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಪೂರ್ಣಗೊಂಡು ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಪೂರ್ಣಾವಧೂತೋತ್ಸವ ಕಾಲದಲ್ಲಿ ವಿರಾಜಿತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಷ್ಟ್ರದ ಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನಿರ್ವಹಣೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

'ಗೋರಕ್ಷಣ'ಕ್ಕೆ ಸಕಲ ನೆರವು ನೀಡಿ

ಗೋರಕ್ಷಣೆ, ಪ್ರಾಣಿದಯೆ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, "ಗೋರಕ್ಷಣ" ವು ತನ್ನ ಬೆಳ್ಳಿ ಹಬ್ಬ ನೆರವೇರಿಸುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, 'ಗೋರಕ್ಷಣ" ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇನೆ

'ಗೋರಕ್ಷಣ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕಿ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

ರಂಗ ಕೈಗಾರಿಕೆ ಮತ್ತು ಸಾಂಸ್ಕೃತಿಕ ವಸ್ತು ಪ್ರದರ್ಶನ, ದೊಡ್ಡಕೆರೆ ಮೈದಾನ

ದಿನಾಂಕ 28-10-76 ನೇ ಗುರುವಾರ

ಂಜೆ 6 ರಿಂದ 7 ಘಂಟೆವರೆಗೆ ಹೆಚ್ ಎಸ್ ತಮ್ಮಯ್ಯರವರಿಂದ ನಾಗಕನ್ನಿಕೆ ನಾದನ

7 ಘಂಟೆಯಿಂದ ಮಾತಾ ಅಸೋಸಿಯೇಷನ್ಸ್‌ರವರಿಂದ " ಪಂಚಭೂತ " ನಾಟಕ

ದಿನಾಂಕ 29-10-76 ನೇ ಗುರುವಾರ

ಂಜೆ 6 ರಿಂದ 7 ಘಂಟೆವರೆಗೆ " ಕುಮಾರಿ ಗೀತಾ " ರವರಿಂದ " ಹಾಡುಗಾರಿಕೆ "

7 ಘಂಟೆಯಿಂದ, ಭಾರತೀ ಕಲಾವಿದರು ಶಿವಮೊಗ್ಗ, ಇವರು ಅರ್ಪಿಸುವ ನಾಟಕ

" ಸಂಗ್ಯಾ – ಬಾಳ್ಯ "

ವುಡ್‌ಲಾಂಡ್ಸ್ 22 10 76 ರಿಂದ

ಅವೋಘ 2ನೇ ವಾರ

ಮಾ

ಧರ್ಮೇಂದ್ರ ಹೇಮಮಾಲಿನಿ ಅಭಿನಯ

ಹಿಂದಿ

ಕಲರ್

ದಿನ ¼ ಪ್ರದರ್ಶನಗಳು

ಅಪೂರ್ವ 22 10 76ರಿಂದ

ಒಂದು ಊಹಾತೀತ

ಕಣ್ಣೀ ಸಿನಿಮಾ ಸ್ಕೋಪ್

ಕಮಲಾ ಹಾಸನ್ ಸುಜಾತ ಅಭಿನಯ

ಮಿಳು ಪ್ರತಿ ದಿನ 3 ಪ್ರದರ್ಶನಗಳು

Contribute Liberally to
the National Defence Fund

Quality Printing Neat Binding

Lakshminarasimha Press

Sivarampet Mysore

'SHAKTI'

SUDHA

A Superb Tonic

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Edited Printed and Published by Dharmaprachararatha M S. Krishna Rao at Prop. of the Sarvodaya Press, Chamarajapuram Mysore 4